**ಸಾಕ್ಷಿಯನ್ನು ದಿನಾಂಕಃ 06-02-2026 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಪಾಟೀಸವಾಲುಃ ವಾದಿ ಪರ ವಕೀಲರವರಿಂದಃ**

ನಿಡಿ 39 ದಾಖಲೆಯು 2005 ರಿಂದ ನಾನು ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸುವ ವರೆಗೆ ನನ್ನ ಅಣ್ಣನಾದ ಕರಿಬಸಪ್ಪ ಬಳಿ ಇತ್ತು. ಅದು ನನ್ನ ಅಣ್ಣನ ಬಳಿ ಇದ್ದ ಕಾರಣ ಪ್ರತಿವಾದ ಪತ್ರದೊಂದಿಗೆ ಅದನ್ನು ಸಲ್ಲಿಸಲು ಸಾಧ್ಯವಾಗಲಿಲ್ಲ. ನನ್ನ ಅಣ್ಣ ಮೃತ ಪಟ್ಟ ವರ್ಷ ನನಗೆ ಗೊತ್ತಿರುವುದಿಲ್ಲ. ನಿಡಿ 39 ದಾಖಲೆಯು ನನ್ನ ಅಣ್ಣನ ಬಳಿ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಿಡಿ 39 ದಾಖಲೆಯನ್ನು ವಕೀಲರಿಗೆ ನಾನೇ ಕೊಟ್ಟಿದ್ದೇನೆ. ನಿಡಿ 39 ದಾಖಲೆಯು ಸಕ್ರಿ ಗಂಗಪ್ಪ ಇವರು ನನ್ನ ಅಮ್ಮನ ಮೇಲೆ ಹಾಕಿದ್ದ ದಾವೆಗೆ ಸಂಬಂದಿಸಿದ ತೀರ್ಪಾಗಿರುವುದು. ನಿಡಿ 39 ಕ್ಕೆ ಸಂಬಂದಿಸಿದ ಕೇಸಿನ ವಿವರಗಳು ನನಗೆ ಗೊತ್ತಿರುವುದಿಲ್ಲ.

2. ನಿಡಿ 39 ದಾಖಲೆಯ 4 ನೇ ಪುಟದಲ್ಲಿ ಆ ಕೇಸಿನ ವಾದಿಯಾದ ಗಂಗಪ್ಪನಿಗೆ ಆ ಕೇಸಿನ ದಾವಾ ಅಸ್ತಿಯಲ್ಲಿ ಮಾಲ್ಕಿ ಹಕ್ಕು ಹಾಗೂ ಸ್ವಾಧೀನ ಇರುವುದಿಲ್ಲ ಎಂದು ಉಲ್ಲೇಕ ಇರುವುದಿಲ್ಲ ಅಂದರೆ ಸರಿಯಲ್ಲ. OS No. 119/1998 ರ ವಾದಿಯ ಅಜ್ಜ ನ ಹೆಸರು ಸಕ್ರಿ ಗಂಗಪ್ಪ ತಂದೆ ಹುಚ್ಚೆಂಗಪ್ಪ ಅಂದರೆ ಇದ್ದರು ಇರಬಹುದು. ನಿಡಿ 39 ರಲ್ಲಿ OS No. 119/1998 ರ ವಾದಿಯಾದ ಸಕ್ರಿ ಗಂಗಪ್ಪನ ತಂದೆಯ ಹೆಸರು ಪಕ್ಕೀರಪ್ಪ ಮತ್ತು ಅಜ್ಜನ ಹೆಸರು ಸಕ್ರಿ ಗಂಗಪ್ಪ ತಂದೆ ಹುಚ್ಚೆಂಗೆಪ್ಪ ಎಂದು ನಮೂದು ಇರುವುದು ಅಂದರೆ ಸರಿ.

3. ವಾದಿಯ ಅಜ್ಜನಾದ ಸಕ್ರಿ ಗಂಗಪ್ಪನ ಹೆಸರಿನಿಂದ ಆತನ ಮಗನಾದ ಪಕ್ಕೀರಪ್ಪನ ಹೆಸರಿಗೆ ಮುಟೇಶಕಶನ್ ಆಗದೇ ನೇರವಾಗಿ ಆ ಕೇಸಿನ ವಾದಿಯಾದ ಸಕ್ರಿ

ಗಂಗಪ್ಪನ ಹೆಸರಿಗೆ ಮುಟೇಶನ್ ಆಗಿದೆ ಎಂದು ನ್ಯಾಯಾಲಯವು ಸದರಿ ಕೇಸಿನಲ್ಲಿ ಗಮನಿಸಿರುತ್ತದೆ ಅಂದರೆ ನನಗೆ ಆ ಬಗ್ಗೆ ಗೊತ್ತಿಲ್ಲ. OS No. 119/1998 ರಲ್ಲಿ ನ್ಯಾಯಾಲಯವು ಸದರಿ ಕೇಸಿನ ವಾದಿಯು ಅವಶ್ಯಕ ಪಕ್ಷಗಾರರನ್ನು ದಾವೆಯಲ್ಲಿ ಸೇರಿಸಿರುವುದಿಲ್ಲ ಎಂಬ ವಿಚಾರವನ್ನು ತೀರ್ಪಿನಲ್ಲಿ ಚರ್ಚಿಸಿರುತ್ತದೆ ಅಂದರೆ ನನಗೆ ಆ ಬಗ್ಗೆ ಗೊತ್ತಿಲ್ಲ. ಅವಶ್ಯಕ ಪಕ್ಷಗಾರರನ್ನು ಸೇರಿಸದ ಕಾರಣ ಮತ್ತು ಆ ದಾವೆಗೆ ವಾದಿಯು ತನ್ನ ಮಾಲ್ಕಿ ಹಾಗೂ ಸ್ವಾಧೀನ ಹಕ್ಕನ್ನು ರುಜುವಾತು ಪಡಿಸದೇ ಇರುವ ಕಾರಣ ಸದರಿ ದಾವೆ ವಜಾಗೊಂಡಿರುತ್ತದೆ ಅಂದರೆ ಸರಿಯಲ್ಲ.

4. ನನ್ನ ತಾಯಿ ಖರೀದಿ ಮಾಡಿದರು ಎಂದು ಹೇಳಲಾದ ಮತ್ತು ಸದರಿ ದಾವೆಯಲ್ಲಿ ನಿಡಿ 1 ರಂತೆ ನಿಶಾನೆಗೊಂಡಿರುವ ಖರೀದಿ ಪತ್ರವು ಕಾನೂನು ಬದ್ದವಾಗಿ ನೊಂದಣಿ ಆಗಿರುವುದಿಲ್ಲ ಎಂದು ನ್ಯಾಯಾಲಯ ಹೇಳಿರುತ್ತದೆ ಅಂದರೆ ನನಗೆ ಗೊತ್ತಿಲ್ಲ. ಈ ಕೇಸಿನ ದಾವಾ ಅಸ್ತಿಯ ಮೇಲೆ ನನಗೆ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ ಅಂದರೆ ಸರಿಯಲ್ಲ. ನಮ್ಮ ಖರೀದಿ ಪತ್ರದ ಅಧಾರದ ಮೇಲೆ ವಾದಿಯ ವಿರುದ್ದ ನಾನು ಯಾವುದೇ ದಾವೆ ದಾಖಲು ಮಾಡಿರುವುದಿಲ್ಲ.

**ಮರು ವಿಚಾರಣೆಃ ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿಯಿದೆ.**

**06-02-2026**
**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ**

**ಸಾಕ್ಷಿಯ ಸಹಿ** 06.02.2026